ಆಮೆ, ಅದರ ಮುಂದೆ ಬಾಯಿ ತೆರದಿರುವ ಮೊಸಳೆಗಳು ನೋಡುಗರನ್ನು ಭಯ ಬೀಳಿಸುತ್ತವೆ. ಇನ್ನೊಂದು ಕಡೆ ಚಿಣ್ಣರು ಸಸಿ ನೆಡುವ ಸನ್ನಿವೇಶ ಕಣ್ಮನ ಸೆಳೆಯುತ್ತದೆ. ಗಿಡಕ್ಕೆ ಸುತ್ತಿಕೊಂಡ ಹೆಬ್ಬಾವು ನೋಡುಗರಲ್ಲಿ ನಡುಕ ಹುಟ್ಟಿಸುವಂತಿದೆ. ಮುಂದೆ ಸಾಗಿದಂತೆ ಆನೆ, ಜಿಂಕೆ, ಸಾರಂಗ, ಕಾಡೆಮ್ಮೆ, ನಾಗರಹಾವು, ಹುಲಿಯ ಬಾಯಿಗೆ ಸಿಕ್ಕ ಜಿಂಕೆ, ಬೇಟೆಗೆ ಹೊಂಚು ಹಾಕುತ್ತಿರುವ ಚಿರತೆ, ತನ್ನ ಕಂದಮ್ಮಗಳೊಂದಿಗೆ ಆಹಾರ ಅರಸಿ ಹೊರಟ ಕರಡಿಗಳ ದರ್ಶನವಾಗುತ್ತದೆ. ನರಿ, ತೋಳಗಳು ಅಡಗಿ ಕುಳಿತಿರುವ ತಾಣಗಳು ಸಿಗುತ್ತವೆ. ನಾಗರಹಾವೊಂದು ಬುಸ್ ಅಂತ ಹೆಡೆ ಎತ್ತಿರುತ್ತದೆ. ಹೀಗೆ ಥೇಟ್ ಕಾಡುಪ್ರಾಣಿಗಳನ್ನು ಪ್ರತ್ಯಕ್ಷವಾಗಿ ನೋಡಿದಂತೆ ಭಾಸವಾಗುತ್ತದೆ. ಅಷ್ಟೊಂದು ಸುಂದರವಾಗಿ ಈ ಟ್ರೀ ಪಾರ್ಕ್ ನಿರ್ಮಾಣಗೊಂಡಿದೆ.

## 125 ಎಕರೆಯ ಹಸಿರುಸಿರಿ

ತಿಮ್ಮಕ್ಕ ಪಾರ್ಕ್ ಸುಮಾರು 125 ಎಕರೆ ಅರಣ್ಯ ಪ್ರದೇಶದಲ್ಲಿ ವಿವಿಧ ಕಲಾಕೃತಿಗಳಿಂದ ಸುಂದರವಾಗಿ ರೂಪಿಸಲಾಗಿದೆ. ಒಳಗಡೆ ಶೌಚಾಲಯ, ಆರಾಮಾಗಿ ಕುಳಿತುಕೊಳ್ಳಲು ಆಸನಗಳು, ಪುಟ್ಟ ಕೆರೆ, ಶುದ್ಧ ಕುಡಿಯುವ ನೀರಿನ ವ್ಯವಸ್ಥೆ ಮತ್ತು ಮಕ್ಕಳು ಆಟವಾಡಲು ಆಟಿಕೆಗಳನ್ನು ಅಳವಡಿಸಲಾಗಿದೆ. ಉಪಾಹಾರಗೃಹ ಕೂಡ ಆರಂಭವಾಗುವ ಹಂತದಲ್ಲಿದೆ.

ಉದ್ಯಾನ ಆರಂಭವಾಗಿರುವುದು ಇನ್ನೂ ಹೆಚ್ಚಿನ ಜನರಿಗೆ ತಿಳಿದಿಲ್ಲವಾದುದರಿಂದ ಸದ್ಯಕ್ಕೆ ಉದ್ಯಾನದಲ್ಲಿ ಜನಜಂಗುಳಿಯೇನೂ ಕಾಣಿಸುವುದಿಲ್ಲ. ಪ್ರಸ್ತುತ ಪ್ರತಿದಿನ ಒಂದು ಸಾವಿರಕ್ಕೂ ಹೆಚ್ಚು ಪ್ರವಾಸಿಗರು ಈ ಸುಂದರ ತಾಣವನ್ನು ಕಣ್ತುಂಬಿಕೊಳ್ಳುತ್ತಿದ್ದಾರೆ. ಶನಿವಾರ, ರವಿವಾರ ಹಾಗೂ ರಜಾದಿನಗಳಲ್ಲಿ ಈ ಸಂಖ್ಯೆ ಹೆಚ್ಚುತ್ತದೆ. ಮುಂದಿನ ದಿನಗಳಲ್ಲಿ ಪ್ರವಾಸಿಗರ ಸಂಖ್ಯೆ ಗಣನೀಯವಾಗಿ ಹೆಚ್ಚುವ ಸಾಧ್ಯತೆಯಿದೆ.

ಉದ್ಯಾನಕ್ಕೆ ಪ್ರವೇಶ ಉಚಿತವೇನಲ್ಲ. ವಯಸ್ಕರಿಗೆ ₹ 20, ಮಕ್ಕಳಿಗೆ ₹ 10 ಶುಲ್ಕ ನಿಗದಿ ಮಾಡಲಾಗಿದೆ. ಅಲ್ಲದೆ ಶಾಲಾ ಪ್ರವಾಸ ಬಂದವರಿಗೆ ರಿಯಾಯಿತಿ ಇದೆ. ಶಿಕ್ಷಕರಿಗೆ ₹ 10, ವಿದ್ಯಾರ್ಥಿಗಳಿಗೆ ₹ 5ರಂತೆ ಪಡೆಯಲಾಗುತ್ತಿದೆ. ಆದರೆ ಶಾಲಾ ಮುಖ್ಯಸ್ಥರಿಂದ ಕಡ್ಡಾಯವಾಗಿ ಪ್ರಮಾಣಪತ್ರ ತರಬೇಕು. ಬೆಳಿಗ್ಗೆ 9ರಿಂದ ಸಾಯಂಕಾಲ 5 ಗಂಟೆಯವರೆಗೆ ಪ್ರವಾಸಿಗರ ವೀಕ್ಷಣೆಗೆ ಸಮಯ ನಿಗದಿ ಮಾಡಲಾಗಿದೆ.

ತಿಮ್ಮಕ್ಕ ಉದ್ಯಾನದ ಅಭಿವೃದ್ಧಿ ಚಟುವಟಿಕೆಗಳು ಇನ್ನೂ ಸಾಕಷ್ಟು ಆಗಬೇಕಿದೆ. ಮುಖ್ಯವಾಗಿ ಆಗಬೇಕಾದುದು ಕಿಡಿಗೇಡಿಗಳ ನಿಯಂತ್ರಣಕ್ಕೆ ಕಣ್ಗಾವಲು ಕ್ಯಾಮೆರಾಗಳ ಅಳವಡಿಕೆ. ಅಂತೆಯೇ, ಸಮೀಪದಲ್ಲಿನ ತುಂಗಭದ್ರಾ ಹಿನ್ನೀರಿಗೆ ಪೈಪ್‌ಲೈನ್ ಹಾಕಿದರೆ ಉದ್ಯಾನವನವನ್ನು ಇನ್ನಷ್ಟು ಸುಂದರಗೊಳಿಸಬಹುದು ಎನ್ನುವುದು ಸ್ಥಳೀಯರ ಅಭಿಪ್ರಾಯ.

ತಿಮ್ಮಕ್ಕ ಉದ್ಯಾನವನ ಒಂದುರೀತಿಯಲ್ಲಿ ಪ್ರಾದೇಶಿಕ ಭಾವನೆಯನ್ನು ಮೀರುವ ಪ್ರಯತ್ನವೂ ಹೌದು. ಎಲ್ಲಿಯ ತಿಮ್ಮಕ್ಕ? ಎಲ್ಲಿಯ ಕೊಪ್ಪಳ? ಪ್ರಾದೇಶಿಕ ದೃಷ್ಟಿಯಿಂದ ಉತ್ತರ ದಕ್ಷಿಣ ಧ್ರುವಗಳಂತಿರುವ ಕೊಪ್ಪಳವನ್ನೂ ತಿಮ್ಮಕ್ಕನ ಮಾಗಡಿಯನ್ನೂ ಒಟ್ಟಾಗಿ ಬೆಸೆದಿರುವ ತಂತು ಪರಿಸರ ಪ್ರೇಮ. ನಾಡಿನ ಸಾಧಕರನ್ನು ಗೌರವಿಸುವುದು ಹೀಗಲ್ಲವೇ?

